# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಗುಂಪು ಹತ್ಯೆ/ಗುಂಪು ಗಲಭೆ ಸಂತ್ರಸ್ಥ ಪರಿಹಾರ ಯೋಜನೆ (Lynching / Mob violence Victim Compensation Scheme) ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:1)** ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಡಿ 1 ಪಿಸಿಬಿ 2011, ದಿನಾಂಕ:22.02.2012.

**2)** ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:754/2016, ದಿನಾಂಕ:17.07.2018ರಂದು ನೀಡಿರುವ ಆದೇಶ.

**3)** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿ ದಿನಾಂಕ 28.08.2023.

------

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಅಧಿಸೂಚನೆಯಲ್ಲಿ, ಅಪರಾಧ ದಂಡ ಪ್ರಕ್ರಿಯೆ ಸಂಹಿತೆ, 1973ರ ಕಲಂ 357 A ರಲ್ಲಿನ ಉಪಬಂಧಗಳನ್ವಯ ಅಪರಾಧ ಕೃತ್ಯಗಳಿಂದ ಬಾಧಿತರಾದ ಸಂತ್ರಸ್ತರಿಗೆ ಅಥವಾ ಅವಲಂಬಿತರಿಗೆ ನಷ್ಟ ಅಥವಾ ನಷ್ಟ ಅನುಭವಿಸಿದವರಿಗೆ ಪರಿಹಾರದ ಉದ್ದೇಶಕ್ಕಾಗಿ ಪರಿಹಾರವನ್ನು ಒದಗಿಸಲು ರಾಜ್ಯ ಸರ್ಕಾರವು ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011 (Karnataka Victim Compensation Scheme, 2011) ರಚಿಸಲಾಗಿರುತ್ತದೆ.

ಮೇಲೆ ಓದಲಾದ (2)ರಲ್ಲಿ ಘನ ಸರ್ವೋಚ್ಚ ನ್ಯಾಯಾಲಯವು ಗುಂಪು ಹತ್ಯೆ/ಗುಂಪು ಗಲಭೆಗಳಲ್ಲಿ ಸಂತ್ರಸ್ತರಾದವರಿಗೆ ಎಲ್ಲಾ ರಾಜ್ಯ ಸರ್ಕಾರಗಳು ಅಪರಾಧ ದಂಡ ಪ್ರಕ್ರಿಯೆ ಸಂಹಿತೆ, 1973ರ ಕಲಂ 357 A ರನ್ವಯ ಸಂತ್ರಸ್ತ ಪರಿಹಾರ ಯೋಜನೆಯನ್ನು ರೂಪಿಸುವಂತೆ ನಿರ್ದೇಶಿಸಿರುತ್ತದೆ.

ಮೇಲೆ ಓದಲಾದ (3)ರ ನಡವಳಿಯಲ್ಲಿ ಈಗಾಗಲೇ ರಾಜ್ಯ ಸರ್ಕಾರವು ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011(Karnataka Victim Compensation Scheme, 2011) ರಚಿಸಲಾಗಿದ್ದರೂ, ಗುಂಪು ಹತ್ಯೆ/ಗುಂಪು ಗಲಭೆಗಳಲ್ಲಿ ಸಂತ್ರಸ್ತರಾದವರಿಗೆ/ ಅವಲಂಬಿತರಿಗೆ ಪರಿಹಾರ ನೀಡಲು ಪ್ರತ್ಯೇಕ ಆದೇಶ ಹೊರಡಿಸಬೇಕಾದ ಅಗತ್ಯತೆ ಇದೆ ಎಂಬುದಾಗಿ ಅಭಿಪ್ರಾಯಪಡಲಾಗಿರುತ್ತದೆ.

ಆದುದರಿಂದ, ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011(Karnataka Victim Compensation Scheme, 2011) ಅಡಿಯಲ್ಲಿ ಗುಂಪು ಹತ್ಯೆ/ಗುಂಪು ಗಲಭೆಗಳಲ್ಲಿ ಸಂತ್ರಸ್ತರಾದವರು/ ಅವಲಂಬಿತರು ಪರಿಹಾರ ಕೋರಬಹುದಾದ ಅವಕಾಶಗಳು ಸ್ಪಷ್ಟವಾಗಿ ಒಳಗೊಳ್ಳದೇ ಇರುವುದರಿಂದ ಹಾಗೂ ಘನ ಸರ್ವೋಚ್ಚ ನ್ಯಾಯಾಲಯವು ಮೇಲೆ ಓದಲಾದ (2)ರಲ್ಲಿನ ತೀರ್ಪಿನಲ್ಲಿ ಗುಂಪು ಹತ್ಯೆ/ಗುಂಪು ಗಲಭೆಗಳಲ್ಲಿ ಸಂತ್ರಸ್ತರಾದವರಿಗೆ/ ಅವಲಂಬಿತರಿಗೆ ಪರಿಹಾರ ನೀಡಲು ಯೋಜನೆಯನ್ನು ರೂಪಿಸುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ

ನೀಡಿರುವುದರಿಂದ, ಈ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸುವುದು ಸೂಕ್ತವೆಂದು ಸರ್ಕಾರವು ನಿರ್ಣಯಿಸಿದೆ.

ಮೇಲಿನ ಅಂಶಗಳನ್ನು ಪರಿಶೀಲಿಸಿ , ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 01 ಸಿಆರ್‌ಆರ್ 2023,**
**ಬೆಂಗಳೂರು ದಿನಾಂಕ 27.09.2023**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಘನ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ರಾಜ್ಯದಲ್ಲಿ ಸಂಭವಿಸುವ ಗುಂಪು ಹತ್ಯೆ/ಗುಂಪು ಗಲಭೆಗಳಲ್ಲಿ (Lynching/Mob violence Victims) ಸಂತ್ರಸ್ತರಾದವರಿಗೆ ಹಾಗೂ ಅವರ ಅವಲಂಬಿತರಿಗೆ ಕೆಳಕಂಡ ಅನುಸೂಚಿಯಲ್ಲಿರುವಂತೆ ಪರಿಹಾರ ನೀಡಲು ಸಂತ್ರಸ್ತ ಪರಿಹಾರ ಯೋಜನೆ (**Victim Compensation Scheme**) ಕಾರ್ಯಗತಗೊಳಿಸಿ ಆದೇಶಿಸಿದೆ.

**ಅನುಸೂಚಿ**

| ಕ್ರ ಸಂ. | ನಷ್ಟ ಅಥವಾ ಹಾನಿಯ ವಿವರಗಳು | *ಅನ್ವಯಿಸುವ ಕನಿಷ್ಠ ಪರಿಹಾರದ ಮೊತ್ತ (ರೂ.ಲಕ್ಷಗಳಲ್ಲಿ) | *ಅನ್ವಯಿಸುವ ಗರಿಷ್ಠ ಪರಿಹಾರದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | ಪ್ರಾಣ ಹಾನಿ | 5.00 | 10.00 |
| 2. | ಪುನರ್ವಸತಿ ಕಲ್ಪಿಸುವಂತಹ ತೀರ್ವತರವಾದ ಗಾಯ ಅಥವಾ ಇತರೆ ಮಾನಸಿಕ ಹಾನಿ/ತೊಂದರೆ. | 1.00 | 2.00 |
| 3. | ಕೈಕಾಲು ಹಾಗೂ ಇತರೆ ದೇಹ ಭಾಗದ ಅಂಗಾಗಗಳು, ಖಾಯಂ/ ಭಾಗಶಃ ಶೇಕಡಾ 80ರಷ್ಟು ಅಂಗವೈಕಲ್ಯ. | 2.00 | 5.00 |
| 4. | ಕೈಕಾಲು ಹಾಗೂ ಇತರೆ ದೇಹ ಭಾಗದ ಅಂಗಾಗಗಳು, ಖಾಯಂ/ ಭಾಗಶಃ ಶೇಕಡಾ 40 ರಿಂದ 80 ರಷ್ಟು ಅಂಗವೈಕಲ್ಯ. | 2.00 | 4.00 |
| 5. | ಕೈಕಾಲು ಹಾಗೂ ಇತರೆ ದೇಹ ಭಾಗದ ಅಂಗಾಗಗಳು, ಖಾಯಂ/ ಭಾಗಶಃ ಶೇಕಡಾ 20 ರಿಂದ 40ರಷ್ಟು ಅಂಗವೈಕಲ್ಯ. | 1.00 | 3.00 |
| 6. | ಕೈಕಾಲು ಹಾಗೂ ಇತರೆ ದೇಹ ಭಾಗದ ಅಂಗಾಗಗಳು, ಖಾಯಂ/ ಭಾಗಶಃ ಶೇಕಡಾ 20 ಕ್ಕಿಂತ ಕಡಿಮೆ ಅಂಗವೈಕಲ್ಯ. | 1.00 | 2.00 |

* Karnataka Victim Compensation Scheme, 2011ರಡಿ ನಿಗದಿಪಡಿಸಲಾಗಿರುವ ಮೊತ್ತ.

ಗುಂಪು ಹತ್ಯೆ/ಗುಂಪು ಗಲಭೆ ಸಂತ್ರಸ್ಥ ಪರಿಹಾರ ಯೋಜನೆ (Lynching / Mob violence Victim Compensation Scheme) ಅಡಿ ಪರಿಹಾರವನ್ನು ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011 (Karnataka Victim Compensation Scheme, 2011)ರಡಿ ಸ್ಥಾಪಿಸಲಾಗಿರುವ ಪರಿಹಾರ ನಿಧಿಯಿಂದ ಪಾವತಿಸತಕ್ಕದ್ದು ಹಾಗೂ ಪರಿಹಾರದ ಮೊತ್ತ ನಿರ್ಣಯ ಮತ್ತು ಪಾವತಿ ಬಗ್ಗೆ ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011 (Karnataka Victim Compensation Scheme, 2011)ರಡಿಯಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 350 ವೆಚ್ಚ-11/2023, ದಿನಾಂಕ:21.09.2023ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Banadaranganiah NR

**(ಬಾಣದರಂಗಯ್ಯ ಎನ್.ಆರ್.)** 27/09/23
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಒಳಾಡಳಿತ ಇಲಾಖೆ (ಕಾನೂನು & ಸುವ್ಯವಸ್ಥೆ)
☎2203 3254. **e-mail**: uslo-home@karnataka.gov.in

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), (ಇ&ಎಸ್ಎಸ್ಎ) ಮತ್ತು (ಎ&ಇ), ಅಂಚೆಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2) ಕಾರ್ಯದರ್ಶಿ(ಸಿಎಸ್ ಡಿವಿಷನ್), ಗೃಹಮಂತ್ರಾಲಯ, ಭಾರತ ಸರ್ಕಾರ, ನಾರ್ಥ್ ಬ್ಲಾಕ್, ನವದೆಹಲಿ.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ.
4) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, 1ನೇ ಮಹಡಿ, ನ್ಯಾಯದೇಗುಲ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು-27.
5) ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು
6) ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ನಂ.1, ಕಾರ್ಲ್‌ಟನ್ ಹೌಸ್, ಅರಮನೆ ರಸ್ತೆ, ಬೆಂಗಳೂರು.
7) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಆಡಳಿತ/ಕಾ&ಸು/ಅಪರಾಧಗಳು, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು.
8) ನಿರ್ದೇಶಕರು, ರಾಜ್ಯ ಗುಪ್ತವಾರ್ತೆ, ನೃಪತುಂಗ ರಸ್ತೆ, ಬೆಂಗಳೂರು.
9) ನಿರ್ದೇಶಕರು, ಅಭಿಯೋಗಗಳು ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಕಾವೇರಿ ಭವನ, ಬೆಂಗಳೂರು.
10) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
11) ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು
12) ಎಲ್ಲಾ ಪೊಲೀಸ್ ಆಯುಕ್ತರುಗಳು(ಡಿಜಿ & ಐಜಿಪಿ, ಬೆಂಗಳೂರುರವರ ಮುಖಾಂತರ).

13) ಎಲ್ಲಾ ಜಿಲ್ಲೆಯ ಪೊಲೀಸ್ ಅಧೀಕ್ಷಕರುಗಳು (ಡಿಜಿ & ಐಜಿಪಿ, ಬೆಂಗಳೂರುರವರ ಮುಖಾಂತರ).
14) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನ ಸೌಧ.
15) ಸರ್ಕಾರದ ಅಧೀನ ಕಾರ್ಯದರ್ಶಿ (ಪೊಲೀಸ್ ವೆಚ್ಚ) ಒಳಾಡಳಿತ ಇಲಾಖೆ, ವಿಧಾನ ಸೌಧ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
16) ಶಾಖಾ ರಕ್ಷಾ ಕಡತ/ಒಡಿಜಿಸಿ/ಹೆಚ್ಚುವರಿ ಪ್ರತಿಗಳು.

<u>**ಪ್ರತಿ ಮಾಹಿತಿಗಾಗಿ:**</u>

1) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ.
2) ಸರ್ಕಾರದ ಗೃಹ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿಸಿಎಎಸ್) ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ.
6) ಸರ್ಕಾರದ ಅಪರ ಕಾರ್ಯದರ್ಶಿ, ಪೊಲೀಸ್ ಸೇವೆಗಳು / ಸರ್ಕಾರದ ಜಂಟಿ ಕಾರ್ಯದರ್ಶಿ, ಕಾನೂನು & ಸುವ್ಯವಸ್ಥೆ, ಪೊಲೀಸ್ ಸಹಾಯಕ ಸೇವೆಗಳು / ಸರ್ಕಾರದ ಉಪಕಾರ್ಯದರ್ಶಿ, ಅಪರಾಧ, ಸೆರಮನೆ ಮತ್ತು ಸಿನಿಮಾ ರವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ, ವಿಧಾನ ಸೌಧ.
7) ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ, ವಿಧಾನ ಸೌಧ.
8) ಒಳಾಡಳಿತ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿಗಳು, ವಿಧಾನ ಸೌಧ.